ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಪ್ರಸ್ತಾವನೆಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ನರ್ಮ್ ಯೋಜನೆ

473(824); ಡಾ: ಸುಧಾಕರ್ ಕೆ

ಅ) ನರ್ಮ್ ಯೋಜನೆ ಅಡಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಐಶಾರಾಮಿ ಹವಾನಿಯಂತ್ರಿತ ಬಸ್‌ಗಳನ್ನು ಖರೀದಿಸಲಾಗಿದೆ; ವೆಚ್ಚ ಮಾಡಿದ ಒಟ್ಟು ಮೊತ್ತ ಎಷ್ಟು;

ಆ) ಯಾವ ಯಾವ ಕಂಪನಿಯಿಂದ ಖರೀದಿಸಲಾಗಿದೆ: ಖರೀದಿಗೆ ಅನುಸರಿಸಿದ ಮಾನದಂಡ ಏನು; (ವರ್ಷವಾರು ವಿವರ ಸಲ್ಲಿಸುವುದು)

ಇ) ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸಾರಿಗೆ ನಿಗಮಕ್ಕೆ ಖರೀದಿಸಿದ ಒಟ್ಟು ಬಸ್‌ಗಳ (ಎಲ್ಲಾ ವಿಧ) ಸಂಖ್ಯೆ ಎಷ್ಟು, ವರ್ಷವಾರು ವಿವರ ನೀಡುವುದು;

ಈ) ರಾಜ್ಯ ರಸ್ತೆ ಸಾರಿಗೆ ನಿಗಮದ ನಾಲ್ಕೂ ವಿಭಾಗಗಳ ವಾರ್ಷಿಕ ವಹಿವಾಟು ಎಷ್ಟು, ನಷ್ಟ ಅನುಭವಿಸುತ್ತಿರುವ ನಿಗಮ ಯಾವುದು; ಲಾಭಗಳಿಸಲು ಕೈಗೊಂಡ ಕ್ರಮ ಯಾವುವು?

ಶ್ರೀ ರಾಮಲಿಂಗಾ ರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) 44 ಬಸ್ಸುಗಳು ವೆಚ್ಚ ಮಾಡಿದ ಮೊತ್ತ 34.88 ಕೋಟಿ ರೂ.ಗಳು

ಆ) ಮೆ//ವೊಲ್ವೊ ಬಸಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ರವರಿಂದ ಕೆಟಿಪಿಪಿ ಕಾಯ್ದೆಯನ್ವಯ ಖರೀದಿಸಲಾಗಿರುತ್ತದೆ.

ಇ) ವಿವರಗಳನ್ನು **ಅನುಬಂಧ–'ಅ'** ನಲ್ಲಿ ಒದಗಿಸಿದೆ

ಈ) 2012–13ನೇ ಸಾಲಿನ ವಾರ್ಷಿಕ ವಹಿವಾಟು

ಕೋಟಿ ರೂ.ಗಳಲ್ಲಿ

ಕರಾರಸಾನಿ	2592.32
ಬೆಂಮಸಾಸಂ	1660.46
ವಾಕರಸಾಸಂ	1314.00
ಈಕರಸಾಸಂ	1133.41
ಒಟ್ಟು	**6700.19**

ನಷ್ಟ ಅನುಭವಿಸುತ್ತಿರುವ ನಿಗಮಗಳ ವಿವರ (2012–13ನೇ ಸಾಲಿನಲ್ಲಿ)

ಸಂಸ್ಥೆ	ನಷ್ಟ (ಕೋಟಿಗಳಲ್ಲಿ)
ಬೆಂಮಸಾಸಂ	147 95
ವಾಕರಸಾಸಂ	63.31
ಈಕರಸಾಸಂ	20.92
ಒಟ್ಟು	**232.18**

ನಷ್ಟವನ್ನು ಕಡಿಮೆಗೊಳಿಸಲು ಈ ಕೆಳಕಾಣಿಸಿದ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಕಾರ್ಯಾಚರಣೆ ವೆಚ್ಚವನ್ನು ಕಡಿಮೆ ಮಾಡಲು ಸೂಕ್ತ ಕ್ರಮ ಕೈಗೊಂಡಿದೆ
2 ಕಾಂಟ್ರಾಕ್ಟ್ ಕ್ಯಾರೇಜ್ ಪಡೆದು ಸ್ಟೇಜ್ ಕ್ಯಾರೇಜ್‌ನಂತೆ ಕಾರ್ಯಾಚರಣೆ ಮಾಡುತ್ತಿರುವ ಅನಧೀಕೃತ ಖಾಸಗಿ ವಾಹನಗಳನ್ನು ಸರ್ಕಾರವು ಸ್ಥಗಿತಗೊಳಿಸಿದ್ದು, ಸದರಿ ಮಾರ್ಗಗಳಲ್ಲಿ ಸಂಸ್ಥೆಯ ವಾಹನಗಳನ್ನು ಕಾರ್ಯಾಚರಣೆಗೊಳಿಸಿ, ಆದಾಯ ಹೆಚ್ಚಿಸಲಾಗಿದೆ.
3. ತನಿಖಾ ಕಾರ್ಯವನ್ನು ಚುರುಕುಗೊಳಿಸಿ, ಆದಾಯ ಸೋರಿಕೆಯನ್ನು ನಿಯಂತ್ರಿಸಲಾಗಿದೆ.
4 ನೆರೆ ರಾಜ್ಯಗಳೊಂದಿಗೆ ಅಂತರರಾಜ್ಯ ಒಪ್ಪಂದ ಮಾಡಿಕೊಳ್ಳುವ ಕ್ರಮ ಜಾರಿಯಲ್ಲಿದೆ. ಸಧ್ಯದಲ್ಲೆ ಅನುಸೂಚಿಗಳ ಕಾರ್ಯಾಚರಣೆ ಮಾಡಿ, ಆದಾಯ ಹೆಚ್ಚಿಸಲಾಗುವುದು
5. ಸಂಸ್ಥೆಯ ವ್ಯಾಪ್ತಿಯಲ್ಲಿರುವ ಬಸ್ ನಿಲ್ದಾಣಗಳಿಂದ ವಾಣಿಜ್ಯ ಆದಾಯ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ

6. ಎಲ್ಲಾ ನಗರಗಳಲ್ಲಿ ನಗರ ಸಾರಿಗೆಗಳನ್ನು ಪ್ರಾರಂಭಿಸಿ, ಆದಾಯ ಹೆಚ್ಚಿಸಲಾಗಿದೆ.
7. ಎಲ್ಲಾ ಮಾರ್ಗಗಳಲ್ಲಿ ಇ.ಟಿ.ಎಂ. ಟಿಕೇಟ್ ವಿತರಿಸುವ ಯಂತ್ರಗಳನ್ನು ವಿತರಿಸಿ, ತ್ವರಿತಗತಿಯಲ್ಲಿ ಟಿಕೇಟ್ ವಿತರಿಸಲು ಕ್ರಮ ಕೈಗೊಂಡು, ಆದಾಯ ಸೋರಿಕೆಯನ್ನು ತಡೆಗಟ್ಟಲಾಗಿದೆ.

ಪ್ರತಿ ತಿಂಗಳು ಎಲ್ಲಾ ವಿಭಾಗ/ಘಟಕಗಳ ಪ್ರಗತಿ ಪರಿಶೀಲನೆ ಮಾಡಲಾಗುತ್ತಿದ್ದು, ಋಣಾತ್ಮಕ ಅಂಶಗಳ ಕುರಿತು ಕೂಡಲೇ ಕ್ರಮ ಜರುಗಿಸಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ: 824ರ ಅನುಬಂಧಗಳು

ಅನುಬಂಧ–ಅ

ಕ.ರಾ.ರ.ಸಾ. ನಿಗಮವು ಕಳೆದ ಮೂರು ವರ್ಷ (2010–11, 2011–12, 2012–13)ಗಳಲ್ಲಿ ಒಟ್ಟು 3396 ಬಸ್‌ಗಳನ್ನು ಖರೀದಿಸಲಾಗಿರುತ್ತದೆ ವರ್ಷವಾರು ವಿವರ ಕೆಳಕಂಡಂತಿರುತ್ತದೆ.

ಕ್ರ.ಸಂ.	ವಾಹನಗಳ ಮಾದರಿ	2010–11	2011–12	2012–13
1	ಕರ್ನಾಟಕ ಸಾರಿಗೆ (ಎನ್ ಎ ಎಲ್)	964	565	715
2	ಗ್ರಾಮಾಂತರ ಸಾರಿಗೆ	179	129	11
3	ನಗರ ಸಾರಿಗೆ	45	202	61
4	ರಾಜಹಂಸ	75	21	74
5	ರಾಜಹಂಸ ಹವಾನಿಯಂತ್ರಿತ	02	0	0
6	ಕರ್ನಾಟಕ ವೈಭವ್	10	47	25

7	ಹವಾನಿಯಂತ್ರಿತ ರಹಿತ ಸ್ಲೀಪರ್	0	43	16
8	ಕರೋನಾ ಅಂಬಾರಿ ಸ್ಲೀಪರ್	06	24	[illegible]
9	ವೋಲ್ವೋ ನಗರ ಸಾರಿಗೆ	8	0	[illegible]
10	ವೋಲ್ವೋ ಸಿಂಗಲ್ ಆ್ಯಕ್ಸೆಲ್	40	0	0
11	ವೋಲ್ವೋ ಮಲ್ಟಿ ಆ್ಯಕ್ಸೆಲ್	32	38	26
12	ಮರ್ಸಿಡಿಸ್ ಬೆಂಜ್ ಸಿಂಗಲ್ ಆ್ಯಕ್ಸೆಲ್	10	0	[illegible]
13	ಮರ್ಸಿಡಿಸ್ ಬೆಂಜ್ ಮಲ್ಟಿ ಆ್ಯಕ್ಸೆಲ್	0	10	[illegible]
	ಒಟ್ಟು	**1371**	**1079**	**946**

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ವರ್ಷ	ಟಾಟಾ	ಲೇ ಲ್ಯಾಂಡ್	ವೋಲ್ವೋ	ಕರೋನ	ಒಟ್ಟು ವಾಹನಗಳ ಸಂಖ್ಯೆ
2010-11	14	–	44	–	**58**
2011-12	300	23	51	15	**389**
2012-13	374	112	49	10	**545**

ಹೊಸ ಬಸ್ ನಿಲ್ದಾಣ

474 (825); ಡಾ ಸುಧಾಕರ್ ಕೆ

ಅ) ಕಳೆದ ಮೂರು ವರ್ಷ ಅವಧಿಯಲ್ಲಿ ರಾಜ್ಯಾದ್ಯಂತ ಎಷ್ಟು ಹೊಸ ಬಸ್ ನಿಲ್ದಾಣಗಳನ್ನು ನಿರ್ಮಿಸಲಾಗಿದೆ, ಪ್ರತಿ ಬಸ್ ನಿಲ್ದಾಣದ ಯೋಜನಾ ವೆಚ್ಚದ ವಿವರ ನೀಡುವುದು;

ಆ) ನಿಲ್ದಾಣ ನಿರ್ಮಾಣದ ಗುತ್ತಿಗೆ ಪಡೆದ ಸಂಸ್ಥೆಗಳು ಯಾವುದು (ವಿವರ ಸಹಿತ ಮಾಹಿತಿ ಒದಗಿಸುವುದು);